**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 01 ಎಆರ್‌ಬಿ 2019 ಕರ್ನಾಟಕ ಸರ್ಕಾರ ಸಚಿವಾಲಯ

ವಿಧಾನ ಸೌಧ, ಬೆಂಗಳೂರು,
ದಿನಾಂಕ: 22.05.2019

**ಅಧಿಸೂಚನೆ**

ಭಾರತ ಸಂವಿಧಾನದ 166ನೇ ಅನುಚ್ಛೇದದ ಕಲಂ (2) ಮತ್ತು (3) ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲರು, ಕರ್ನಾಟಕ ಸರ್ಕಾರದ (ಕೆಲಸಗಳ ಹಂಚಿಕೆ) ನಿಯಮಗಳು, 1977, ಇದಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸಿದ್ದಾರೆ. ಎಂದರೆ,-

**1. ಶೀರ್ಷಿಕೆ ಮತ್ತು ಪ್ರಾರಂಭ,-** 1) ಈ ನಿಯಮಗಳನ್ನು ಕರ್ನಾಟಕ ಸರ್ಕಾರದ (ಕೆಲಸಗಳ ಹಂಚಿಕೆ) (ತಿದ್ದುಪಡಿ) ನಿಯಮಗಳು, 2019 ಎಂದು ಕರೆಯತಕ್ಕದ್ದು,

2) ಇವುಗಳು 2018ನೇ ಇಸವಿಯ ಆಗಸ್ಟ್ ಎಂಟನೇ ತಾರೀಖಿನಿಂದ ಜಾರಿಗೆ ಬಂದಿದೆಯೆಂದು ಭಾವಿಸತಕ್ಕದ್ದು.

**2. ಅನುಸೂಚಿ XIV ಕ್ಕೆ ತಿದ್ದುಪಡಿ,-** ಕರ್ನಾಟಕ ಸರ್ಕಾರ (ಕೆಲಸಗಳ ಹಂಚಿಕೆ) ನಿಯಮಗಳು,1977ರ ಅನುಸೂಚಿ **XIV** ರಲ್ಲಿ, **"ಕಂದಾಯ ಇಲಾಖೆ"** ಶೀರ್ಷಿಕೆಯ ಅಡಿಯಲ್ಲಿ,-

(i) **"ಸಿ.ಮುಜರಾಯಿ"** ಉಪ ಶೀರ್ಷಿಕೆಗೆ **"ಸಿ. ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ"** ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

(ii) ಈ ರೀತಿ ಪ್ರತಿಸ್ಥಾಪಿಸಲಾದ ಉಪ ಶೀರ್ಷಿಕೆಯಡಿಯಲ್ಲಿ, ಕ್ರಮ ಸಂಖ್ಯೆ (1) ರಲ್ಲಿ, ಮುಜರಾಯಿ" ಎಂಬ ಪದಕ್ಕೆ "ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

ಸಹಿ/-
(ವಾಜುಬಾಯಿವಾಲಾ)
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಚಂದ್ರಹಾಸ ಗಂ.ತಾಳೂಕರ)
ಸರ್ಕಾರದ ಉಪ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)